


International Journal of Kannada Research
www.kannadajournal.com

**ISSN: 2454–5813**
IJKR 2021; 7(4): 223-225
© 2021 IJKR
www.kannadajournal.com
Received: 01-08-2021
Accepted: 03-09-2021

**ಡಾ. ಭಾಸ್ಕರ ಶೆಟ್ಟಿ ಎಸ್**
ಇತಿಹಾಸ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು ಕೂಡ
ಡಾ. ಗಷ್ಕರ್ ಸರ್ಕಾರಿ ಮಹಿಳಾ ಕಾಲೇಜು, ಅಜ್ಜರಕಾಡು, ಉಡುಪಿ, ಕರ್ನಾಟಕ, ಭಾರತ

**Corresponding Author:**
**ಡಾ. ಭಾಸ್ಕರ ಶೆಟ್ಟಿ ಎಸ್**
ಇತಿಹಾಸ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು ಕೂಡ
ಡಾ. ಗಷ್ಕರ್ ಸರ್ಕಾರಿ ಮಹಿಳಾ ಕಾಲೇಜು, ಅಜ್ಜರಕಾಡು, ಉಡುಪಿ, ಕರ್ನಾಟಕ, ಭಾರತ

# ದಕ್ಷಿಣ ಕನ್ನಡದಲ್ಲಿ ವಸಾಹತುಶಾಹಿ ಆಳ್ವಿಕೆ ಪೂರ್ವದ ಭೂಒಡೆತನ

**ಡಾ. ಭಾಸ್ಕರ ಶೆಟ್ಟಿ ಎಸ್**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರಂಭದಿಂದಲೂ ಬಂಟರು ಮತ್ತು ಜೈನರು ರಾಜಕೀಯ ಮತ್ತು ಸೈನಿಕ ಮುಖ್ಯಸ್ಥರಾಗಿದ್ದರು. ಇವರು ತಮ್ಮ ಭೂಮಿಯನ್ನು ತಮ್ಮ ಅನುಯಾಯಿಗಳ ಮೂಲಕ ಸಾಗುವಳಿ ಮಾಡಿಸುತ್ತಿದ್ದರು. ರಾಜಕೀಯ ಮತ್ತು ಸೈನಿಕ ಪ್ರಾಮುಖ್ಯತೆಯಿಂದ ಬೇರೆ ಬೇರೆ ಹಿಡುವಳಿಯ ಕೃಷಿ ಭೂಮಿಯು, ಬೇರೆ ಬೆರೆ ಕಾಲಘಟ್ಟದಲ್ಲಿ ಇವರ ಒಡೆತನಕ್ಕೆ ಒಳಪಟ್ಟಿತ್ತು. ಕ್ರಮೇಣ ರಾಜಕೀಯ ಮತ್ತು ಸೈನಿಕ ಪ್ರಾಮುಖ್ಯತೆ ಕಳೆದುಕೊಂಡ ಮೇಲೆ ಇವರು ಸಾಮಾನ್ಯ ಭೂಮಾಲಕರಾದರು. "ಜಿಲ್ಲೆಯಲ್ಲಿ ಆಳುಪರ ಕಾಲದಿಂದಲೂ ಭೂಮಾಲಿಕರು ಭೂಮಿಯನ್ನು ನೇರವಾಗಿ ಸಾಗುವಳಿ ಮಾಡಿ ಅಥವಾ ಬೋಗ್ಯಕ್ಕೆ ನೀಡುವುದರ ಮೂಲಕ ಅನುಭವಿಸುತ್ತಿದ್ದರು. ಇವರುಗಳು ಸರ್ಕಾರದ ಪ್ರತಿನಿಧಿಯಾಗಿರುತ್ತಿದ್ದರು. ವಿಜಯನಗರ ಆಳ್ವಿಕೆಯ ಕಾಲದಲ್ಲಿ ರಾಜನು ವಿಶಾಲವಾದ ಭೂಮಿಯ ಒಡೆಯನಾಗಿದ್ದ. ರಾಜನು ಆ ಭೂಮಿಯನ್ನು ಭೋಗ್ಯಕ್ಕೆ ಒಕ್ಕಲುಗಳಿಗೆ ನೀಡುತ್ತಿದ್ದು, ಅವರು ಗೇಣಿಯನ್ನು ರಾಜನ ಖಜಾನೆಗೆ ನೇರವಾಗಿ ನೀಡುತ್ತಿದ್ದರು. ಆ ಕಾಲದಲ್ಲಿ ರಾಜನಿಂದ ನೇಮಕಗೊಂಡ ಪ್ರಾದೇಶಿಕ ರಾಜ್ಯಪಾಲರುಗಳು ಭೂಮಾಲಕರಾಗಿದ್ದರು. ಬಸ್ರೂರಿನ ಶಾಸನವೊಂದರ ಪ್ರಕಾರ ಹಟ್ಟಿಕುದ್ರು ಗ್ರಾಮವನ್ನು ಬಸ್ರೂರಿನ ಪಡುವಕೇರಿ ತಿರುಮಲ ದೇವರ ಸೇವೆಗಾಗಿ ಬಾರಕೂರು ರಾಜ್ಯದ ರಾಜ್ಯಪಾಲ ಸಂಕಣ್ಣ ನಾಯಕನು ಉಡುಗೊರೆಯಾಗಿ (ಉಂಬಳಿ) ನೀಡಿದ್ದಾನೆ. ರಾಜ ಅಥವಾ ರಾಜ್ಯಪಾಲರು ಖಾಸಗಿ ಒಡೆತನದ ಭೂಮಿಯನ್ನು ಖಾಸಗಿಯವರಿಂದ ಕ್ರಯಕ್ಕೆ ಪಡೆದು ದೇಣಿಗೆ ನೀಡಿದ ಉದಾಹರಣೆ ಇದೆ. ಇದರಿಂದ ಜಿಲ್ಲೆಯಲ್ಲಿ ಭೂ ಆಸ್ತಿಯಲ್ಲಿ ಖಾಸಗಿ ಒಡೆತನವು ಬಹಳ ಹಿಂದಿನಿಂದಲೂ ಇದ್ದಿತ್ತು. ಗ್ರಾಮಕರಣಿಕರು, ಮಧ್ಯಸ್ಥರು, ಶ್ಯಾನುಭೋಗರು, ನಾಯಕರು, ಅಧಿಕಾರಿಗಳು, ಹೆಗ್ಗಡೆ, ಭಂಡಾರಿ ಇವರುಗಳು ರಾಜ್ಯದ ಪ್ರಮುಖ ಭೂಸಂಬಂಧಿ ಅಧಿಕಾರಿಗಳಾಗಿದ್ದು, ಆಳುಪ, ವಿಜಯನಗರ ಹಾಗೂ ಹೊಯ್ಸಳರ ಆಳ್ವಿಕೆಯಲ್ಲಿ ಪ್ರಭಾವಿಗಳಾಗಿದ್ದರು. ಕ್ರಮೇಣ ಇವರು ತಾವೇ ಪರಿಸ್ಥಿತಿಯ ಲಾಭ ಪಡೆದುಕೊಂಡು ಪ್ರಭಾವಿ ಭೂಮಾಲಕರಾದರು. ದೇವಸ್ಥಾನಗಳ ಸುತ್ತ ಫಲವತ್ತಾದ ಕೃಷಿಭೂಮಿಯಲ್ಲಿ ಬ್ರಾಹ್ಮಣ ಸೆಟ್ಲಮೆಂಟ್‍ಗಳು ಕೇಂದ್ರಕೃತವಾಗಿದ್ದು, ಬ್ರಾಹ್ಮಣರು ದೇವಸ್ಥಾನಗಳಲ್ಲಿ ದೇವರ ಪೂಜಾ ಕೈಂಕರ್ಯವನ್ನು ಮಾಡಿಕೊಂಡಿದ್ದರಿಂದ ಭೂದಾನಗಳನ್ನು ಪಡೆದಿದ್ದರು. ವಿಜಯನಗರ ಅರಸರು ಮತ್ತು ಅವರ ರಾಜ್ಯಪಾಲರುಗಳು, ಮಂಗಳೂರು, ಬಾರಕೂರು, ಹೊನ್ನಾವರಗಳಲ್ಲಿ ಗ್ರಾಮಗಳನ್ನು ಬ್ರಾಹ್ಮಣರಿಗೆ ದಾನವಾಗಿ ನೀಡಿದ್ದರು. ತಾವು ದಾನವಾಗಿ ಪಡೆದ ಭೂಮಿಯ ಪರಮಾಧಿಕಾರಿಗಳನ್ನು ತಮ್ಮಲ್ಲೇ ಇಟ್ಟುಕೊಂಡು, ಅಧೀನ ಹಕ್ಕನ್ನು ಕೆಳವರ್ಗದವರಿಗೆ ನೀಡಿದ್ದರು. ಬ್ರಾಹ್ಮಣರಿಗೆ ವ್ಯಾಸಂಗ ಮಾಡಲು, ಕಲಿಕೆಯ ಉದ್ದೇಶಕ್ಕಾಗಿ ದಾನ ನೀಡಿದ ಭೂಮಿಯನ್ನು ಬ್ರಹ್ಮದೇಯ ಹಾಗೂ ಬ್ರಹ್ಮಸ್ವಾಮ್ಯ ಎಂದು ಕರೆಯಲಾಗಿತ್ತು. ಈ ರೀತಿ ಭೂಮಿಯನ್ನು ದಾನ ಮಾಡುವುದು., ಸರ್ವೆ ಸಾಮಾನ್ಯವಾಗಿತ್ತು. ಇಲ್ಲಿ ಭೂದಾನ ಪಡೆದವರು ಭೂಮಾಲಿಕತ್ವದ ಹಕ್ಕನ್ನು ಪಡೆಯುತ್ತಿದ್ದರು [16]. ನೇ ಶತಮಾನದ ಮಧ್ಯಭಾಗದಲ್ಲಿ ಮಹಾರಾಷ್ಟ್ರದಿಂದ ವಲಸೆ ಬಂದ ಹವ್ಯಕ ಬ್ರಾಹ್ಮಣರು ಸೌತ್‍ಕೆನರಾದ ಕೃಷಿ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರುಗಳು ಜಿಲ್ಲೆಯ ಒಳಪ್ರದೇಶದಲ್ಲಿ ನೆಲೆಸಿ, ಅಡಿಕೆ ಕೃಷಿ ಆರಂಭಿಸಿದ್ದರು. ಈ ಹವ್ಯಕರು ಅಡಿಕೆ, ತೆಂಗು, ಕಾಳುಮೆಣಸು ಬೆಳೆಯುತ್ತಿದ್ದರು. ತೋಟದ ಕೃಷಿ ಕೆಲಸವನ್ನು ಕೆಳ ಸಮುದಾಯದವರಿಂದ ಮಾಡಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಜೈನರು ಈ ಭಾಗದಲ್ಲಿ ಭೂಮಾಲಕರಾಗಿದ್ದರು. ಇವರು ಜೈನಧರ್ಮವನ್ನು ಪ್ರೋತ್ಸಾಹಿಸಿ ಬಸದಿಗಳನ್ನು ಕಟ್ಟಿದ್ದರು.

[16] ನೇ ಶತಮಾನದ ಮಧ್ಯಭಾಗದಲ್ಲಿ ಗೌಡಸಾರಸ್ವತ, ಬ್ರಾಹ್ಮಣರ ಧಾರ್ಮಿಕ ಸಂಸ್ಥೆಗಳು ಗಂಗೊಳ್ಳಿ, ಬಸ್ರೂರು, ಮಂಗಳೂರು, ಪುತ್ತೂರು ಮತ್ತು ಮಂಜೇಶ್ವರಗಳಲ್ಲಿ ಭೂಮಾಲಿಕತ್ವ ಪಡೆದಿದ್ದವು. ಆದರೆ

ಇವರುಗಳು ವ್ಯಾಪಾರಸ್ಥರಾದ್ದರಿಂದ ತಾವು ಪಡೆದ ಭೂಮಿಯನ್ನು ಗೇಣಿಗೆ ನೀಡುತ್ತಿದ್ದರು [16]. ಮತ್ತು [17] ನೇ ಶತಮಾನದ ಕರಾವಳಿ ಕರ್ನಾಟಕದಲ್ಲಿ ಮುಸ್ಲಿಮರು ಅನೇಕ ದರ್ಗಾಗಳನ್ನು ಜಿಲ್ಲೆಯ ಉಳ್ಳಾಲ, ಮಿರ್ಜಾನಗಳಲ್ಲಿ ಕಟ್ಟಿಸಿದರು. ಈ ದರ್ಗಾಗಳೂ ಭೂದಾನ ಪಡೆದವು ಇದನ್ನು ಇನಾಂ ಎಂದು ಕರೆಯಲಾಯ್ತು. ಘಟ್ಟದ ಮೇಲಿನ ಮುಸ್ಲಿಮರ ಟಿಪ್ಪುವಿನ ಆಡಳಿತದಲ್ಲಿ ಕಂದಾಯ ಅಧಿಕಾರಿಗಳಾಗಿದು ಭೂದಾನ ಪಡೆಯುತ್ತಿದ್ದರು. 1560–1763ರ ನಡುವೆ ಕರಾವಳಿ ಕರ್ನಾಟಕದಲ್ಲಿ ಕ್ರಿಶ್ಚಿಯನ್ ಜನಸಂಖ್ಯೆ ಹೆಚ್ಚಿತು. ಕ್ರಿಶ್ಚಿಯನ್ನರು ಕೃಷಿಯಲ್ಲಿ ತೊಡಗಿಸಿಕೊಂಡು ಭೂಮಾಲಕರಾದರು. 1623ರಲ್ಲಿ ಮಂಗಳೂರಿನ ಕ್ರಿಶ್ಚಿಯನ್ ಚರ್ಚು ಭೂ ಆಸ್ತಿಯನ್ನು ಹೊಂದಿದ್ದು, ಗೇಣಿದಾರರಿಂದ ಗೇಣಿ ಪಡೆಯುತ್ತಿತ್ತು. ಆದರೆ 1792ರಲ್ಲಿ ಮಂಗಳೂರು, ಮಂಜೇಶ್ವರ, ಮೂಲ್ಕಿ, ಕಲ್ಯಾಣಪುರ, ಬಸ್ರೂರು, ಹೊನ್ನಾವರ, ಅಂಕೋಲ ಮುಂತಾದೆಡೆ ಕ್ರಿಶ್ಚಿಯನ್ನರ ಭೂಮಿಯನ್ನು ಟಿಪ್ಪು ಸುಲ್ತಾನ ಕಸಿದನು [18]. ನೇ ಶತಮಾನದ ಮಧ್ಯಭಾಗದಲ್ಲಿ ಪಶ್ಚಿಮ ಕರ್ನಾಟಕದಲ್ಲಿ ವೀರಶೈವ ಧಾರ್ಮಿಕ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿ, ಇವರ ಮಠಗಳು ಜಿಲ್ಲೆಯ ಕೋಟೇಶ್ವರ, ಬಾರಕೂರು, ಗುರುಪುರ, ಸಿದ್ಧಾಪುರ, ಉಡುಪಿ, ಕಲ್ಯಾಣಪುರ, ಕೊಲ್ಲೂರುಗಳಲ್ಲಿ ಭೂದಾನ ಪಡೆದವು.

**ಸಂಸ್ಥೆಗಳ ಒಡೆತನ**

ಮಧ್ಯಯುಗದ ಯೂರೋಪ್‌ನಲ್ಲಿ ಚರ್ಚ್ ಭೂಮಿಯ ಒಡೆತನ ಹೊಂದಿದ್ದ ಸಂಸ್ಥೆಗಳಲ್ಲಿ ಪ್ರಮುಖವಾಗಿತ್ತು. ಅದರ ಪ್ರಭಾವವು ಗೇಣಿದಾರರ ಮೇಲಲ್ಲದೆ ರಾಜಕೀಯ ವ್ಯವಸ್ಥೆಯ ಮೇಲೂ ವಿಸ್ತರಿಸಿತ್ತು. ಭಾರತದಲ್ಲಿನ ಧಾರ್ಮಿಕ ಸಂಸ್ಥೆಗಳು ಮಧ್ಯಯುಗದ ಚರ್ಚ್‌ನ ಹಾಗೆ ಭೂಮಿಯ ಉತ್ಪಾದನೆಯನ್ನು ಹತೋಟಿಯಲ್ಲಿಟ್ಟುಕೊಂಡು ರಾಜಕೀಯ ಪ್ರಭುತ್ವದ ಆಶ್ರಯದಲ್ಲಿ ಶಕ್ತಿಯುತ ಸಂಸ್ಥೆಗಳಾಗಿ ಗೌರವ ಸಂಪಾದಿಸಿದ್ದವು. ವಿಜಯನಗರ ಕಾಲದಲ್ಲಿ ಸೌತ್‌ಕೆನರಾದಲ್ಲಿ ಊಳಿಗಮಾನ್ಯ ವ್ಯವಸ್ಥೆ ಜಾರಿಯಲ್ಲಿತ್ತು. ಇಲ್ಲಿ ಬ್ರಾಹ್ಮಣರಿಗೆ ಭೂದಾನ ನೀಡಿದ್ದನ್ನು ಅವರು ನೇರವಾಗಿ ಸಾಗುವಳಿ ಮಾಡದೆ, ತಾತ್ಕಾಲಿಕ ರೈತರಿಂದ ಸಾಗುವಳಿ ಮಾಡಿಸುತ್ತಿದ್ದರು. ಇದರಿಂದ ಭೂ ಮಧ್ಯವರ್ತಿಗಳು ಹಾಗೂ ದಾಸ್ಯದ ರೈತವರ್ಗ ಹುಟ್ಟಿಕೊಂಡಿತು. ಹೀಗೆ ಸೌತ್‌ಕೆನರಾ ಸಮಾಜವನ್ನು ಊಳಿಗಮಾನ್ಯವಾಗಿಸುವಲ್ಲಿ ಧಾರ್ಮಿಕ ಸಂಸ್ಥೆಗಳು ತಮ್ಮದೇ ಪಾತ್ರವಹಿಸಿದ್ದವು. ಸೌತ್‌ಕೆನರಾದಲ್ಲಿ ಬಹಳಷ್ಟು ಬ್ರಹ್ಮದೇಯ ಭೂಮಿಗಳಿದ್ದವು. ಬ್ರಹ್ಮದೇಯವು ವೈಯಕ್ತಿಕ ಬ್ರಾಹ್ಮಣರಿಗೆ ಅಥವಾ ಬ್ರಾಹ್ಮಣ ಅಗ್ರಹಾರಗಳಿಗೆ ದಾನವಾಗಿ ನೀಡಿದ ಭೂಮಿ. ಈ ಭೂಮಿಯನ್ನು ಬ್ರಾಹ್ಮಣರಿಗೆ ಧಾರ್ಮಿಕ ವಿಧಿ–ವಿಧಾನವನ್ನು ಕಷ್ಟವಿಲ್ಲದೆ ನೆರವೇರಿಸಲು ನೀಡಿದ್ದಾಗಿದೆ. ಬ್ರಹ್ಮದೇಯ ಭೂಮಿಯನ್ನು ದಾನವಾಗಿ ಪಡೆದವರು ಆ ಭೂಮಿಯನ್ನು ಮಾರಾಟ ಮಾಡುವ, ಅಡವು ಇಡುವ ಯಾ ಬದಲಾಯಿಸುವ ಹಕ್ಕನ್ನು ಹೊಂದಿರುತ್ತಿದ್ದರು. ಈ ಭೂಮಿಗೆ ತೆರಿಗೆ ವಿನಾಯಿತಿ ಇತ್ತು 1345ರ ಉಡುಪಿ ತಾಲೂಕು ಬ್ರಹ್ಮಾವರದ ಕುಮ್ರಗೋಡು ಗ್ರಾಮದ ಕುಲಶೇಖರನ ಕಾಲದ ಶಾಸನವೊಂದು ಬ್ರಹ್ಮದೇಯ ಭೂಮಿಗೆ ಎಲ್ಲಾ ತರಹದ ತೆರಿಗೆ ವಿನಾಯಿತಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಭೂಮಿಯನ್ನು ನೇರವಾಗಿ ದಾನವಾಗಿ ದೇವರು ಮತ್ತು ದೇವತೆಗಳಿಗೆ ನೀಡಿದ್ದನ್ನು ದಿನನಿತ್ಯದ ಪೂಜೆ ಪುರಸ್ಕರ ಹಾಗೂ ಹಬ್ಬಹರಿದಿನಗಳಲ್ಲಿ ವಿಶೇಷ ಪೂಜೆ ಬಾಬ್ತು ನೀಡಿದ್ದನ್ನು 'ದೇವದಾನ' ಎನ್ನಲಾಗಿದೆ. ಈ ಭೂಮಿಗೆ ಯಾವುದೇ ತೆರಿಗೆ ಇರುವುದಿಲ್ಲ. ಕೆಲ ಭೂಮಿಯನ್ನು ಸೇವಾ ಹಿಡುವಳಿಗಾಗಿ ನೀಡಿದ್ದು ವ್ಯಕ್ತಿ ಮತ್ತು ಅಧಿಕಾರಿಗಳಿಗೆ ಅವರು ರಾಜ್ಯಕ್ಕಾಗಿ ಸಲ್ಲಿಸಿದ ಸೇವೆಗೆ ಪ್ರತಿಯಾಗಿ ನೀಡಲಾಗಿದೆ.

ಸಂಸ್ಥೆಗಳ ಭೂ ಒಡೆತನದಲ್ಲಿ ಮುಖ್ಯವಾಗಿ ದೇವಸ್ಥಾನಗಳು, ಮಠಗಳು, ಬಸದಿಗಳು, ಅಗ್ರಹಾರಗಳು ಮತ್ತು ವ್ಯಾಪಾರಿ ಸಂಘಗಳು, ಆಳುಪ ಮತ್ತು ವಿಜಯನಗರ ಕಾಲದ ಶಾಸನಗಳಲ್ಲಿ ಈ ಎಲ್ಲಾ ಸಂಸ್ಥೆಗಳಿಗೆ ಭೂದಾನ ನೀಡಿದ ವಿವರಣೆ ಇದೆ. ದೇವಸ್ಥಾನದ ಭೂಮಾಲಕತ್ವವು ಕೇವಲ ಕೃಷಿ ಭೂಮಿಗೆ ಮಾತ್ರ ಸೀಮಿತವಾಗಿರದೆ ತೋಟದ ಭೂಮಿಯನ್ನು ಕೂಡ ದೇವಸ್ಥಾನಗಳೂ ಹೊಂದಿದ್ದವು. ಬಾರಕೂರಿನ ಶಾಸನವೊಂದು ಅಲ್ಲಿನ ಸೋಮನಾಥ ದೇವಾಲಯವು ಕೃಷಿಯೇತರ ಭೂಮಿ ಹೊಂದಿರುವುದರ ಕುರಿತು ವಿವರಣೆ ನೀಡಿದೆ. ಮಂಜೇಶ್ವರದಲ್ಲಿ ಶ್ರೀ ಅನಂತೇಶ್ವರ ದೇವಾಲಯದ ಒಡೆತನ ಹೊಂದಿದ್ದವರು ಕನ್ನಡ ಬ್ರಾಹ್ಮಣರ ಗೌಡ ಸಾರಸ್ವತ ಸಮುದಾಯ. ಈ ದೇವಸ್ಥಾನವು ಕಾಸರಗೋಡಿನ ಹಲವು ಹಳ್ಳಿಗಳಲ್ಲಿ ಚದುರಿದ್ದ ಭೂಹಿಡುವಳಿಗಳ ಮೇಲೆ ಒಡೆತನ ಹೊಂದಿದ್ದು, ಒಬ್ಬ ಭೂಮಾಲಿಕನಂತೆಯೇ ಜಮೀನು ನಿರ್ವಹಣೆಯ ಎಲ್ಲಾ ಚಟುವಟಿಕೆಗಳಲ್ಲೂ ತೊಡಗಿತ್ತು. ಗ್ರಾಮೀಣ ರೈತರಿಗೆ ಹಣಕಾಸು ಒದಗಿಸುವ ಕೆಲಸವೂ ಸೇರಿದಂತೆ 20ನೇ ಶತಮಾನದಲ್ಲಿ ಈ ದೇವಸ್ಥಾನದಲ್ಲಿದ್ದ ಆಸ್ತಿ ಹಂಚಿಕೆಯನ್ನು ನೋಡಿದರೆ ಅದೊಂದು ದೊಡ್ಡ ಜಮೀನ್ದಾರಿ ಸಂಸ್ಥೆಯಾಗಿದ್ದುದಾಗಿ ತಿಳಿದು ಬರುತ್ತದೆ. ದೇವಾಲಯದ ಪತ್ರಾಗಾರ ಆಸ್ತಿ ರಿಜಿಸ್ಟರ್‌ನಲ್ಲಿರುವಂತೆ ಅದು ಸುತ್ತಲಿನ 24 ಹಳ್ಳಿಗಳಲ್ಲಿ 366 ಎಕ್ರೆ ಗದ್ದೆ, 144 ಎಕ್ರೆ ತೋಟ, 158 ಎಕ್ರೆ ಹೊಲವನ್ನು ಆಸ್ತಿಯಾಗಿ ಹೊಂದಿದ್ದು, ರೂ. 2924 ಆಣೆ 6ನ್ನು ಸರಕಾರಕ್ಕೆ ಭೂಕಂದಾಯವಾಗಿ ನೀಡುತ್ತಿತ್ತು. ಈ ತಾಲೂಕಿನಲ್ಲಿ ಹಲವು ಜಮೀನುಗಳ ಮೇಲೆ ಹತೋಟಿ ಹೊಂದಿದ್ದ ಇನ್ನೊಂದು ಧಾರ್ಮಿಕ ಸಂಸ್ಥೆ ಎಡನೀರು ಮಠ. ಇದು 11 ಹಳ್ಳಿಗಳಲ್ಲಿ 348 ಎಕ್ರೆ ಗದ್ದೆ, 224 ಎಕ್ರೆ ತೋಟ ಮತ್ತು 219 ಎಕ್ರೆ ಒಣನೆಲದ ಮಾಲಕನಾಗಿದ್ದು ಸುಮಾರು 224 ಗೇಣಿದಾರರು ಈ ಮಠದ ಕೆಳಗೆ ಗೇಣಿ ಬೇಸಾಯ ಮಾಡುತ್ತಿದ್ದರು. ಹೀಗೆ ಉಡುಪಿ, ಧರ್ಮಸ್ಥಳ, ಕೊಲ್ಲೂರು ಹಾಗೂ ಇನ್ನೂ ಅನೇಕ ದೇವಸ್ಥಾನಗಳು ಮತ್ತು ಮಠಗಳು ಆ ದಿನದಲ್ಲಿ ಭೂಮಾಲಕತ್ವವನ್ನು ಹೊಂದಿದ್ದವು. ಅವುಗಳ ಆಶ್ರಯದಲ್ಲಿ ನೂರಾರು ಚಾಲಗೇಣಿದಾರರು ಕೃಷಿ ಉತ್ಪಾದನೆಯಲ್ಲಿ ನಿರತರಾಗಿದ್ದರು. 19 ಮತ್ತು 20ನೇ ಶತಮಾನದಲ್ಲಿ ಈ ಸಂಸ್ಥೆಗಳ ಟ್ರಸ್ಟಿಗಳು ವಸಾಹತುಶಾಹಿ ಭೂವ್ಯವಸ್ಥೆಯನ್ನು ಶೋಷಿಸಿ, ಸ್ಥಳೀಯ ಪಟೇಲರು ಮತ್ತು ಶ್ಯಾನುಭೋಗದ ಸಹಾಯದಿಂದ ದೇವಸ್ಥಾನದ ಉಂಬಳಿ ಭೂಮಿಯನ್ನು ತಾವೇ ಕೊಂಡುಕೊಂಡು ಭೂಮಾಲಕರಾಗಿದ್ದರು.

ಜೈನ ಬಸದಿಗಳೂ ಕೂಡ ಭೂಮಾಲಕರಾಗಿದ್ದವು. 1334ರ ಲೋಕನಾಥ ದೇವರಸರ ಹಿರಿಯಂಗಡಿ ಶಾಸನವು ಕಾರ್ಕಳದ ಶಾಂತಿನಾಥ ಬಸದಿಗೆ ಭೂದಾನ ನೀಡಿರುವುದನ್ನು ವರದಿ ಮಾಡಿದೆ. ಬಾರಕೂರಿನ ಚೌಳಿಕೇರಿಯ ಜೈನಮಠಕ್ಕೆ ವಿರೂಪಾಕ್ಷನ ಆಳ್ವಿಕೆಯ ಕಾಲದಲ್ಲಿ ಭೂದಾನ ನೀಡಿದ್ದು, ದಾಖಲೆಯಲ್ಲಿ ಭೂದಾನ ನೀಡಿದ್ದರ ಮೂಲ ಉದ್ದೇಶವನ್ನು ವಿವರಿಸಿದೆ. ಮಂಗಳೂರಿನ ಸಮೀಪದ ಬೋಳೂರಿನ ಶಾಸನವೊಂದರಲ್ಲಿ ಒಂದು ತುಂಡು ಭೂಮಿಯ ಸರಹದ್ದನ್ನು 'ಶೃಂಗೇರಿಯ ಶ್ರೀಪಾದಂಗಳ ಭೂಮಿ ಎಂದಿದೆ' ಅಂದರೆ ಸಾರ್ವಜನಿಕರ ಕಣ್ಣಲ್ಲಿ ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗೆ ಶ್ರೀಪಾದಂಗಳವರೇ ಸ್ವತ: ಮಠದ ಆ ಭೂಮಿಯ ಮಾಲಕರಾಗಿದ್ದಾರೆ. ಶ್ರೀ ಕೃಷ್ಣ ದೇವರಾಯನ ಕಾಲದ ಬಸ್ರೂರಿನ ಶಾಸನವೊಂದರಲ್ಲಿ ಬಾರ್ಕೂರು ಪ್ರದೇಶದಿಂದ ಕರೆತಂದ ಬ್ರಾಹ್ಮಣ ಕುಟುಂಬಗಳಿಗೆ ವೃತ್ತಿಯನ್ನು ಮಂಜೂರು ಮಾಡಿ ವಸತಿ ಹಾಗೂ ಭೂದಾನ ನೀಡಿದ್ದಲ್ಲದೆ, ಕೆಲಗ್ರಾಮಗಳ ಭೂಕಂದಾಯವನ್ನು

ಕೂಡಾ ದಾನವಾಗಿ ನೀಡಲಾಗಿದೆ. ಜಿಲ್ಲೆಯಲ್ಲಿ ಸಾಮೂಹಿಕ ಭೂಮಾಲಕತ್ವವು ಅಸ್ತಿತ್ವದಲ್ಲಿದ್ದು, ವ್ಯಾಪಾರಿ ಸಂಘಗಳಾದ ಸೆಟ್ಟಿಕಾರರು, ಹಲರು, ಹಂಜಮಾನರು, ಮಹಾಜನರು ಕೂಡಾ ಆ ದಿನಗಳಲ್ಲಿ ಭೂಮಿಯನ್ನು ಹೊಂದಿದ್ದು, ತಮ್ಮ ಸ್ವಸಾಮರ್ಥ್ಯದಿಂದ ಸಾಮೂಹಿಕ ಭೂಮಾಲಕರಾಗಿದ್ದರು. ಜಿಲ್ಲೆಯಲ್ಲಿ 13ನೇಯ ಶತಮಾನದ ನಂತರದ ಬಹುತೇಕ ವ್ಯಾಪಾರಸ್ಥರು ಮತ್ತು ವ್ಯಾಪಾರಿ ಸಂಘಗಳು ವ್ಯಾಪಾರದಿಂದ ಹೇರಳ ಹಣ ಸಂಪಾದಿಸಿದ್ದು, ಕೃಷಿ ಪ್ರಧಾನ ಸಮಾಜವೊಂದರಲ್ಲಿ ಭೂಮಾಲಕರಾಗುವುದು ಅತ್ಯಂತ ಗೌರವದ ಪ್ರಶ್ನೆಯಾದ್ದರಿಂದ ಭೂಮಿಯ ಮೇಲೆ ಹಣ ಹೂಡಲಾರಂಭಿಸಿದವು. ಚರ್ಚು ಧಾರ್ಮಿಕ ಸಂಸ್ಥೆ ಮಾತ್ರವಾಗಿರದೆ, ಭೂಮಾಲಕ ಸಂಸ್ಥೆಯೂ ಆಗಿತ್ತು. ಕ್ರೈಸ್ತ ಧಾರ್ಮಿಕ ಸಂಸ್ಥೆಗಳಿಗೆ ಕೆಳದಿ ವೀರಶೈವ ದೊರೆಗಳ ಆಡಳಿತ ಕಾಲದಲ್ಲಿ ಹೇರಳವಾದ ಭೂಮಿಯನ್ನು ದಾನವಾಗಿ ನೀಡಲಾಯಿತು. ಇದೇ ರೀತಿ ಜಿಲ್ಲೆಯಾದ್ಯಂತ ಕೆಳದಿ ನಾಯಕರು ಅನೇಕ ಎಕ್ರೆ ಭೂಮಿಗಳನ್ನು ಚರ್ಚುಗಳಿಗೆ ದಾನವಾಗಿ ನೀಡಿರುತ್ತಾರೆ. ಕನ್ನಡನಾಡಿನಲ್ಲಿ ಇಕ್ಕೇರಿ ನಾಯಕರ ಉಂಬಳಿಯನ್ನೊ, ಉತ್ತಾರವನ್ನೊ ಪಡೆಯದೆ ಇರುವ ಮುಖ್ಯ ದೇವಸ್ಥಾನಗಳೇ ಇಲ್ಲವೆನ್ನಲಾಗಿದೆ. ದೇವಸ್ಥಾನಗಳಂತೆ ಇವರು ಚರ್ಚುಗಳಿಗೂ (ಇಗರ್ಜಿಗಳು) ಹಾಗೂ ಮಸೀದಿಗಳಿಗೂ ಧಾರಾಳ ಭೂ ಉಂಬಳಿ ನೀಡಿರುತ್ತಾರೆ. ಹಿರಿಯ ವೆಂಕಟಪ್ಪ ನಾಯಕ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನವನ್ನು ಶಿಲಾಮಯವಾಗಿ ಕಟ್ಟಿಸಿದ್ದ. ಈತ ಕ್ರಿ.ಶ. 1561ರಲ್ಲಿ ಉಡುಪಿ ಕೃಷ್ಣ ದೇವಸ್ಥಾನಕ್ಕೂ ಹಾಗೂ 1563ರಲ್ಲಿ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನಕ್ಕೂ ಭೂ ಉಂಬಳಿ ನೀಡಿರುತ್ತಾನೆ. ಶಂಕರನಾರಾಯಣ, ಬಸ್ರೂರು, ಕೋಟೇಶ್ವರ, ಕುಂಬಾಶಿ, ಬಾರಕೂರು ದೇವಸ್ಥಾನಗಳಿಗೂ, ಕೆಳದಿ ನಾಯಕರು ಉಂಬಳಿಯನ್ನು ನೀಡಿರುತ್ತಾರೆ.

**ಪರಾಮರ್ಶನ ಗ್ರಂಥಗಳು**

1. ಸ್ಟರಕ್ ಮತ್ತು ಸ್ಟವರ್ಟ್, ಸೌತ್ ಕೆನರಾ ಡಿಸ್ಟ್ರಿಕ್ಟ್ ಮ್ಯಾನುವಲ್, ಬ್ಯಾಸೆಲ್ ಮಿಷನ್ ಪ್ರೆಸ್, 1884
2. ಡಾ. ಪಿ ಗುರುಋಆಜ ಭಟ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಗುರುಋಆಜ್ ಭಟ್ ಟ್ರಸ್ಟ್ 2010
3. ಡಾ.ಬಿ ಸುರೇಂದ್ರ ರಾವ್, ಡಾ. ಚಿನ್ನಪ್ಪ ಗೌಡ, ರಿಟ್ರೈವಡ್ ಎಕ್ರೆ, ಯುನೈಟೆಡ್ ಪಬ್ಲೀಷರ್ಸ್, 2008
4. ಶ್ರೀ. ಶಿವರಾಮ ಕಾರಂತ, ಮರಳಿ ಮನೆಗೆ, ಸಪ್ನ ಬುಕ್‌ಹೌಸ್, ಬೆಂಗಳೂರು, 2009
5. ಮುಕುಂದ ಪ್ರಭು, ಪೊಲಿ, ಜನನಿ ಪ್ರಕಾಶನ, 2002